

ಚಿತ್ರಕೃತಿ : ದಿಲೀಪ್ ಬ್ಯಾನರ್ಜಿ

# ಪ್ರಿಯ ಓದುಗರೆ...

ಪತ್ರಿಕೆಯೊಂದು ಹಲವು ಭಿನ್ನ ವ್ಯಕ್ತಿತ್ವಗಳ, ದನಿಗಳ ಸಮೂಹವಾಗಿ ಮೈದಾಳಬೇಕು. ಆಗಲೇ ಅದಕ್ಕೊಂದು ವಿಶಿಷ್ಟ ಚಹರೆ ಒದಗುತ್ತದೆ. ಕವಿ ದ.ರಾ. ಬೇಂದ್ರೆ ಹೇಳಿದಂತೆ ಅದು ‘ನೂರು ಮರ ನೂರು ಸ್ವರ/ ಒಂದೊಂದೂ ಅತಿ ಮಧುರ/ ಬಂಧವಿರದೆ ಬಂಧುರ/ ಸ್ವಚ್ಛಂದ ಸುಂದರ.’ ಇದು ಎಲ್ಲ ಸಮೂಹ ಕಲೆಗಳಿಗೂ ಅನ್ವಯಿಸುತ್ತದೆ. ಅಲ್ಲಿ ಪ್ರತಿಯೊಂದೂ ಭಿನ್ನ, ಅನನ್ಯ. ನಟನೆಯಲ್ಲಿ ರಾಜ್‌ಕುಮಾರ್, ಅಮಿತಾಭ್ ಬಚ್ಚನ್, ಗಾಯನದಲ್ಲಿ ಎಸ್. ಜಾನಕಿ, ಲತಾ ಮಂಗೇಶ್ಕರ್, ಭೀಮಸೇನ ಜೋಶಿ, ಚಿತ್ರಕಲೆಯಲ್ಲಿ, ಎಂ.ಎಫ್. ಹುಸೇನ್, ಜೈಮಿನಿ ರಾಯ್, ಕೆ.ಕೆ. ಹೆಬ್ಬಾರ್, ಸಾಹಿತ್ಯದಲ್ಲಿ, ಕುವೆಂಪು, ಶಿವರಾಮ ಕಾರಂತ, ಮಾಸ್ತಿ ಅವರ ಶೈಲಿ, ಬದುಕಿನ ಮಂಡನೆ ಪರಸ್ಪರ ಬೇರೆ. ಸೂಕ್ಷ್ಮವಾಗಿ ನೋಡಿದರೆ ಅವು ಒಂದಕ್ಕೊಂದು ಹೆಣೆದುಕೊಂಡೇ ಇರುವಂಥವು. ಇವರೆಲ್ಲರೂ ಸೃಷ್ಟಿಸಿದ ಕಲೆ ಕೊಡುವ ಅನುಭವ ನಮ್ಮನ್ನು ನಾವು ಈವರೆಗೆ ನೋಡಿರದ ಬೇರೊಂದು ದಿಕ್ಕಿಗೆ ಕರೆದೊಯ್ಯುತ್ತದೆ, ಮೂಕವಿಸ್ಮಿತರನ್ನಾಗಿ ಮಾಡುತ್ತದೆ. ಅತ್ಯುತ್ತಮ ಕಲಾಕೃತಿ ತನ್ನ ಸಹವಾಸಕ್ಕೆ ಬಂದವರನ್ನು ವಿನೀತರನ್ನಾಗಿಸುತ್ತದೆ. ಆ ಮೂಲಕ ನಮ್ಮ ವ್ಯಕ್ತಿತ್ವದ ಎಲ್ಲೆಗಳನ್ನು ವಿಸ್ತರಿಸುತ್ತಿರುತ್ತದೆ.

‘ಮಯೂರ’ವೂ ಹಲವು ದನಿ, ಬನಿಗಳ ಸಂಪುಟ; ಮೋಹಕ ರಾಗಗಳ ಕಲರವ, ಅನೇಕ ರಂಗುಗಳ ಚಿತ್ತಾರ. ಈ ಸಂಚಿಕೆಯೂ ಹತ್ತಾರು ಲೇಖಕರ, ಕಲಾವಿದರ ಪ್ರತಿಭೆಯ ಮಿಂಚುಗಳನ್ನು ಒಳಗೊಳ್ಳಲು ಪ್ರಯತ್ನಿಸಿದೆ. ಬೇರೆಬೇರೆ ವಯಸ್ಸು, ಸ್ತರ, ಹಿನ್ನೆಲೆಯ ವ್ಯಕ್ತಿಗಳ ಅನುಭವದ ಲೋಕ ನಿಮ್ಮ ಎದುರಿಗಿದೆ. ನಮ್ಮೆಲ್ಲರ ಸಂವೇದನೆಗಳಿಗೆ ಸಂಬಂಧಿಸಿದ್ದೇ ಆದ ಈ ಉಲಿಯ ಉಯ್ಯಾಲೆಯಲ್ಲಿ ಕೂತು ಎಲ್ಲರೂ ಜೀಕಬಹುದು. ನದಿಯ ಹರಿವಿನ ಗುಂಟ ತೇಲುವ ದೋಣಿಯಂತೆ ನಮ್ಮ ಅಕ್ಷರ ಲೋಕದ ಪಯಣ. ಕೆಲವೊಮ್ಮೆ ಅದು ಗಂಭೀರ, ಆಳ, ಸುಳಿಗಳಿಂದ ಕೂಡಿದ್ದರೂ ಹಗುರವಾಗಿ ನಮಗೆ ಭಾವಲೋಕದ ದರ್ಶನ ಮಾಡಿಸುತ್ತದೆ. ಕಾಡು ನೋಡಲು ಹೋದ ಪಯಣಿಗ ಅಲ್ಲಿನ ತೊರೆ, ಮರ, ಪ್ರಾಣಿಗಳನ್ನು ಕಾಣುವಂತೆ, ಹಕ್ಕಿಗಳ ಇಂಚರ ಕೇಳುವಂತೆ, ಮಣ್ಣಿನ ಗಂಧವನ್ನು ಒಳಗೆ ಎಳೆದುಕೊಳ್ಳುವಂತೆ ಈ ಸಂಚಿಕೆಯಲ್ಲಿ ಬರಹಗಳ ವೈವಿಧ್ಯವಿದೆ. ಬದುಕಿನ ಏಕಾಂತ, ಲೋಕಾಂತ, ಲೌಕಿಕ, ಅಲೌಕಿಕವಾದದ್ದು ಎಲ್ಲರ ಗ್ರಹಿಕೆಗೆ ಪ್ರತಿದಿನವೂ ಒದಗಿ ಬರುತ್ತಲೇ ಇರುತ್ತವೆ. ಅಂಥ ಕ್ಷಣಗಳನ್ನು ಕಣ್ಣಮುಂದೆ ತರಲಿರುವ ಇಲ್ಲಿನ ಬರಹಗಳು ಓದುಗರಿಗೆ ಪ್ರಿಯವಾಗುತ್ತವೆ ಎಂಬುದು ನಮ್ಮ ವಿಶ್ವಾಸ.

**ಸಂದೀಪ ನಾಯಕ**